ಅವರ ಮತ್ತು ಕುಟುಂಬ ವರ್ಗದವರ ಯೋಗಕ್ಷೇಮವನ್ನು ವಿಚಾರಿಸುವುದು ಕೇಶವರಾವ ಸಾಳುಂಕೆ ಲಾಗಾಯ್ತಿನಿಂದಲೂ ರೂಢಿಸಿಕೊಂಡು ಬಂದ ಪದ್ಧತಿಯಾಗಿತ್ತು. ಇದೆಲ್ಲ ಆತನ ವ್ಯಾಪಾರಿ ಮನೋಭಾವದ ಚಾಣಾಕ್ಷತನವೆಂದು ಕೆಲವರು ಮಾತನಾಡಿಕೊಂಡರೂ ಯಾರೂ ಅವರೆದುರು ಬಾಯಿಬಿಟ್ಟು ಹೇಳುವ ಧೈರ್ಯ ತೋರುತ್ತಿರಲಿಲ್ಲ. ವಾಡಿಕೆಯಂತೆ ಜನರಲ್ ಮ್ಯಾನೇಜರ್ ರಾಮನಾಥ ಚಿದ್ರಿ ತನ್ನ ಆಫೀಸಿನ ಸಿಬ್ಬಂದಿಯನ್ನು ಮುಖ್ಯಸ್ಥರಿಗೆ ಪರಿಚಯಿಸುತ್ತಿರುವಾಗ ಶೇಷಗಿರಿ ಪುರೋಹಿತನನ್ನು ನೋಡಿದ್ದೆ ಸಾಳುಂಕೆ 'ಏನ್ರಿ ಪುರೋಹಿತ ಹೇಗಿದ್ದೀರಿ' ಎಂದು ತಾವೇ ಮುಂದಾಗಿ ಮಾತನಾಡಿಸಿ ಕೈ ಕುಲುಕಿದವರು ಪ್ರೇಮಚಂದನನ್ನು ನೋಡುತ್ತಲೇ ಯಾರು ನೀನು ಎಂದು ಪ್ರಶ್ನಿಸಿದ್ದು ಪ್ರೇಮಚಂದನಿಗೆ ಸಾಳುಂಕೆ ಸಾಹೇಬರು ತನ್ನ ಅಸ್ತಿತ್ವವನ್ನೇ ಪ್ರಶ್ನಿಸಿದಂತಾಗಿ ಅವಮಾನದಿಂದ ಕುಗ್ಗಿಹೋದ. ಕಳೆದ ನಾಲ್ಕು ತಿಂಗಳ ಹಿಂದಷ್ಟೆ ಜನರಲ್ ಮ್ಯಾನೇಜರ್ ರಾಮನಾಥ ಕಂಪನಿಯ ಇಪ್ಪತ್ತೈದನೇ ವರ್ಷಾಚರಣೆಯ ನಿಮಿತ್ತ ಕಂಪನಿಯ ಬೆಳವಣಿಗೆ ಮತ್ತು ಸಾಧನೆ ಕುರಿತು ದಿನಪತ್ರಿಕೆಗೆ ಲೇಖನ ಬರೆಯುವಂತೆ ಪ್ರೇಮಚಂದನನ್ನು ನಿಯೋಜಿಸಿ ಅವನನ್ನು ಮುಖ್ಯಸ್ಥ ಕೇಶವರಾವ ಸಾಳುಂಕೆ ಅವರ ಸಂದರ್ಶನ ಮಾಡಲು ಹೆಡ್ ಆಫೀಸಿಗೆ ಕಳುಹಿಸಿದ್ದ. ಸಾಳುಂಕೆ ಸಂದರ್ಶನದೊಂದಿಗೆ ಪ್ರೇಮಚಂದ ಬರೆದ ಸವಿವರವಾದ ಲೇಖನ ಪತ್ರಿಕೆಯ ಇಡೀ ಪುಟದ ತುಂಬ ಪ್ರಕಟವಾಗಿ ಪ್ರೇಮಚಂದನಲ್ಲಿ ಧನ್ಯತೆ ಮತ್ತು ಅಭಿಮಾನ ಒಟ್ಟೊಟ್ಟಿಗೆ ಮೂಡಲು ಕಾರಣವಾಗಿತ್ತು. ಆ ದಿನ ಕೇಶವರಾವ ಸಾಳುಂಕೆ ಹೆಡ್ ಆಫೀಸಿನ ತಮ್ಮ ಚೇಂಬರಿನಲ್ಲಿ ಪ್ರೇಮಚಂದನನ್ನು ಗೌರವದಿಂದಲೇ ಕಂಡಿದ್ದರು. ಸಂದರ್ಶನದುದ್ದಕ್ಕೂ ಪ್ರೀತಿಯಿಂದಲೇ ಮಾತನಾಡಿಸಿ ಮಧ್ಯಾಹ್ನದ ಲಂಚ್ ಕೂಡ ತಮ್ಮ ಚೇಂಬರಿನಲ್ಲೇ ವ್ಯವಸ್ಥೆ ಮಾಡಿದ್ದರು. ಮಧ್ಯದಲ್ಲಿ ತಮಗೆ ಭೇಟಿಯಾಗಲು ಯಾರನ್ನೂ ಒಳಗಡೆ ಬಿಡಬಾರದೆಂದು ಆದೇಶಿಸಿದ್ದ ಸಾಳುಂಕೆ ಆ ಇಡೀ ಅರ್ಧ ದಿನವನ್ನು ಪ್ರೇಮಚಂದನೊಂದಿಗೆ ಕಳೆದು ಅವನಲ್ಲಿ ಧನ್ಯತೆಯ ಭಾವವನ್ನು ಮೂಡಿಸಿದ್ದರು. ಆ ದಿನದ ಭೇಟಿಯ ನಂತರ ಕಂಪನಿಯ ಮುಖ್ಯಸ್ಥರ ಭಾವದಲ್ಲಿ ತನ್ನ ಚಿತ್ರ ಸ್ಥಿರವಾಗಿ ನಿಲ್ಲುತ್ತದೆಂದು ಸಂಭ್ರಮಿಸಿದ ಪ್ರೇಮಚಂದನ ಆಶಾಗೋಪುರ ಇವತ್ತಿನ ಸಾಳುಂಕೆ ಅವರ ಪ್ರಶ್ನೆಯಿಂದ ಕುಸಿದು ಬಿದ್ದು ಅವನಲ್ಲಿ ಒಂದು ರೀತಿಯ ಅಶಾಂತಿಯನ್ನು ಮತ್ತು ಅಸ್ತಿತ್ವದ ಪ್ರಶ್ನೆಯನ್ನು ಏಕಕಾಲಕ್ಕೆ ಹುಟ್ಟಿಸಿತ್ತು.

ಕಳೆದ ಇಪ್ಪತ್ತು ವರ್ಷಗಳಿಂದ ಬಹುರಾಷ್ಟ್ರೀಯ ಕಂಪನಿಯ ಶಾಖಾ ಕಚೇರಿಯೊಂದರಲ್ಲಿ ಲೆಕ್ಕ ಪರಿಶೋಧಕನಾಗಿ ಕೆಲಸ ಮಾಡುತ್ತಿರುವ ಪ್ರೇಮಚಂದ ಗಲಗಲಿ ಆ ಕಡೆ ಶ್ರೀಮಂತನೂ ಅಲ್ಲದ ಈ ಕಡೆ ಬಡವನೂ ಅಲ್ಲದ ಮಧ್ಯಮವರ್ಗಕ್ಕೆ ಸೇರಿದ ಭಾರತದ ಸತ್ಪ್ರಜೆ. ತಾನು, ತನ್ನ ಕೆಲಸ, ತನ್ನ ಕುಟುಂಬ ಎಂದು ಸೀಮಿತ ಚೌಕಟ್ಟಿನಲ್ಲಿ ಬದುಕುತ್ತ ಉಳಿದ ಯಾವ ಉಸಾಬರಿಗೂ ಹೋಗದ ಸಾಧು ಸ್ವಭಾವದ ಮನುಷ್ಯ. ತನ್ನ ದೈನಂದಿನ ಉಪದ್ರವಗಳ ನಡುವೆಯೂ ಆಗಾಗ ಕಥೆ ಕಾದಂಬರಿಗಳನ್ನು ಓದುವ ಮತ್ತು ತನಗನಿಸಿದ್ದನ್ನು ಬರೆಯುವ ಚಟವಿದೆ. ಪ್ರೇಮಚಂದನ ನಾಲ್ಕಾರು ಪುಸ್ತಕಗಳನ್ನು ಪ್ರಕಾಶಕರೊಬ್ಬರು ಪ್ರಕಟಿಸಿದ್ದರಿಂದ ಮನೆಯ ಕಪಾಟಿನಲ್ಲಿ ಕುವೆಂಪು, ಕಾರಂತ, ಭೈರಪ್ಪ, ತೇಜಸ್ವಿ ಅವರ ಪುಸ್ತಕಗಳ ಸಾಲಿನಲ್ಲಿ ಕುಳಿತ ತನ್ನ ಪುಸ್ತಕಗಳ ಮೈದಡವಿ ತಾನೊಬ್ಬ ಬರಹಗಾರನೆಂದು ಆಗಾಗ ಪುಳಕಗೊಳ್ಳುತ್ತಾನೆ. ತಾನೊಬ್ಬ ಬರಹಗಾರನೆಂಬ ಕಾರಣಕ್ಕೆ ಜನರಲ್ ಮ್ಯಾನೇಜರ್ ರಾಮನಾಥ ತನ್ನನ್ನು ಕಂಪನಿಯ ಬಗ್ಗೆ ಲೇಖನ ಬರೆಯಲು ಪುಸಲಾಯಿದ್ದನೆಂದು ಮತ್ತು ಬಾಸ್‌ನ ಸಂದರ್ಶನಕ್ಕೆ ಅವಕಾಶ ಮಾಡಿಕೊಟ್ಟನೆಂದು ತಿಳಿದುಕೊಂಡಿದ್ದ ಪ್ರೇಮಚಂದನಿಗೆ ತನ್ನೊಳಗಿನ ಬರವಣಿಗೆಯ ಈ ಪ್ರತಿಭೆಯಿಂದಾಗಿ ಕಂಪನಿಯಲ್ಲಿ ತನ್ನ ಗೌರವ ಮತ್ತು ಸ್ಥಾನಮಾನ ಹೆಚ್ಚಲಿದೆಯೆಂದು ಭಾವಿಸಿದ್ದವನಿಗೆ ಕಂಪನಿಯ ಬಾಸ್ ತನ್ನನ್ನು ಅಪರಿಚಿತನಂತೆ ನಡೆಸಿಕೊಂಡಿದ್ದು ನಿರಾಸೆಗೆ ಕಾರಣವಾಗಿತ್ತು. ಸಂದರ್ಶನದ ನೆಪದಲ್ಲಿ ತನ್ನೊಂದಿಗೆ ಇಡೀ ಅರ್ಧ ದಿನವನ್ನು ಕಳೆದ